





ಪುಟ್ಟಂಜ: ನಿನ್ ಮಗ ಏನ್ಮಾಡ್ಕಂಡವ್ನೆ?
ನಂಜ: ಬಿಎ ಮಾಡ್ಕಂಡವ್ನೆ?
ಪುಟ್ಟಂಜ: ಜೀವನಕ್ಕೆ ಏನ್ಮಾಡ್ಕಂಡವ್ನೆ?
ನಂಜ: ಬಿಎ ಮಾಡ್ಕಂಡವ್ನೆ.
ಪುಟ್ಟಂಜ: ಅಂದ್ರೆ.
ನಂಜ: ಬೋಂಡದ ಅಂಗಡಿ.

ಪತ್ರಕರ್ತ: ನಿಮ್ಮ ಧಾರಾವಾಹಿಯೆ ಟಾಪ್ ಅಂತ ಯಾವ ಆಧಾರದ ಮೇಲೆ ಹೇಳ್ತೀರಾ?
ನಿರ್ದೇಶಕ: ನಮ್ಮ ಧಾರಾವಾಹಿಯ ನಾಯಕಿಗೆ ಅಂತಹ ಪಾರದರ್ಶಕ ಟಾಪ್ ಹಾಕ್ಸಿದ್ದೀವಿ, ಅದ್ಕೆ.

ಹೆಂಡತಿ: ಅಷ್ಟೊತ್ತಿನಿಂದ ಏನು ಹುಡುಕುತ್ತಿದ್ರಿ?
ಗಂಡ: ಪಿ.ಎಚ್‌ಡಿ ಕಣೇ. ಎಷ್ಟು ಹುಡುಕಿದ್ರೂ ಸಿಗ್ತಾನೇ ಇಲ್ಲ.
ಹೆಂಡತಿ: ಪಿ.ಎಚ್‌ಡಿ. ಎಂದರೇನು?
ಗಂಡ: ಅದೆ ಕಣೇ ಪೈಜಾಮಾ ಹೋಲ್ಡಿಂಗ್ ಡಿವೈಸ್ ಮೀನ್ಸ್ ಪೈಜಾಮಾ ಲಾಡಿ.

ಪುಟ್ಟಂಜ: ಲೋ ನಂಜ ಯಾಕೋ ಯಾವಾಗ್ಲೂ ವಟವಟ ಅಂತ ಮಾತಾಡ್ತಾ ಇರ್ತೀಯಾ?
ನಂಜ: ನಮ್ ಕನ್ನಡ ಭಾಷೇನಾ ನಾವೇ ಮಾತಾಡಿ ಬೆಳೆಸಬೇಕಲ್ಲ, ಅದಕ್ಕೆ.

ಪುಟ್ಟಂಜ: ಸ್ವಾಮಿಗಳೆ ಮನೇಲಿ ಶಾಂತಿ ಇರಬೇಕು ಅಂದ್ರೆ ಏನ್ಮಾಡಬೇಕು?
ಪುರೋಹಿತರು: ಹುಟ್ಟೋ ಮಗಳಿಗೆ ಶಾಂತಿ ಅಂತ ಹೆಸರು ಇಟ್ಟಿಡಿ ಅಷ್ಟೇ.

ಪುಟ್ಟಂಜ: ನಂಜ ಮದುವೆ ಆದ್ಮೇಲೆ ಜೀವನ ಹ್ಯಾಗೆ ನಡಿತಿದೆ?
ನಂಜ: ಜೀವನ ಹ್ಯಾಗೊ ನಡೀತಾ ಇದೆ. ಏನ್ ನಡೀತಿಲ್ಲ ಅಂತ ಕೇಳು?
ಪುಟ್ಟಂಜ: ಏನ್ ನಡೀತಿಲ್ಲ.
ನಂಜ: ನನ್ ಮಾತು.




ಪುಟ್ಟಂಜ: ಇರೋ ಒಬ್ನೇ ಒಬ್ಬ ಮಗನನ್ನ ಯಾಕೋ ಬ್ಯಾರೆ ಹಾಕಿದ್ದೀಯಾ?
ನಂಜ: ನಾನು ಬದುಕಿರುವಾಗಲೆ ತನ್ನನ್ನ ತಾನು, 'ನಾನು ಮಣ್ಣಿನ ಮಗ, ಮಣ್ಣಿನ ಮಗ' ಅಂತ ಹೇಳ್ಕೊಂಡು ಓಡಾಡ್ತಾ ಇದ್ದ. ಅದ್ಕೇ ಬ್ಯಾರೆ ಹಾಕಿದ್ದೀನಿ.

ಪುಟ್ಟಂಜ: ನಂಜ ಈ ರಾಜಕಾರಣಿಗಳಿಗೆ ಜಾಮೀನು ಬೇಗ ಸಿಗುತ್ತೆ, ಅಷ್ಟೇ ಬೇಗ ಜಾಮೀನು ವಿಸ್ತರಣೆ ಆಗುತ್ತೆ, ಏನವರ ಕರಾಮತ್ತು?
ನಂಜ: ಅವರ ಜಮೀನೆ ದಿನೇ ದಿನೇ ವಿಸ್ತರಣೆ ಆಗ್ತಾ ಇರುತ್ತೆ, ಇನ್ನು ಜಾಮೀನು ಯಾವ ಲೆಕ್ಕ.

ರಸಪ್ರಶ್ನೆ ಕಾರ್ಯಕ್ರಮದಲ್ಲಿ ಕ್ವಿಜ್ ಮಾಸ್ಟರ್ ಒಬ್ಬರು ಪುಟ್ಟಂಜನಿಗೆ ಹೀಗೆ ಕೇಳಿದರು...
ಕ್ವಿಜ್ ಮಾಸ್ಟರ್: 'ಕಮಲದ ಕಣ್ಣೋಳೆ, ಕಮಲದ ಮೊಗದೋಳೆ ಕಮಲವ ಕೈಯಲ್ಲಿ ಹಿಡಿದೋಳೆ' ಈ ಹಾಡನ್ನು ಬರೆದವರು ಯಾರು?
ಪುಟ್ಟಂಜ: ಈ ಹಾಡನ್ನು ಬರೆದವರು ಕಮಲ ಚಿಹ್ನೆಯ ಬಿಜೆಪಿಯವರೇ ಆಗಿರಬೇಕು ಸರ್!

ಪುಟ್ಟಂಜ: ನಂಜ ನಿಮ್ಮಮ್ಮ ಏನ್ಮಾಡ್ಕಂಡವ್ರೆ?
ನಂಜ: ಸೊಸೆ ಜೊತೆ ಜಗಳ ಮಾಡ್ಕಂಡವ್ರೆ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ